ತೆಂಗಿನ ಸಸಿಗಳಿಗೆ ತಗಲಿರುವ ನುಸಿರೋಗದ ನಿವಾರಣೆ

458 - ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ತೆಂಗಿನ ಸಸಿಗಳಿಗೆ ನುಸಿ ರೋಗ ಅಥವಾ ಇನ್ನಿತರೆ ರೋಗಗಳು ತಗಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ರೋಗ ತಗುಲಿರುವ ಸಸಿಗಳ ಸಂಖ್ಯೆ ಎಷ್ಟು (ಜಿಲ್ಲಾವಾರು : ತಾಲ್ಲೂಕುವಾರು ವಿವರ ಒದಗಿಸುವುದು)*

ಇ) *ಈ ರೋಗ ನಿವಾರಣೆಗಾಗಿ ಸರ್ಕಾರ ಒದಗಿಸಿದ ಹಣ ಎಷ್ಟು? ಹಾಗೂ ರೋಗ ನಿವಾರಣೆಗಾಗಿ ಕೈಗೊಂಡ ಕ್ರಮಗಳೇನು?*

ಶ್ರೀ ಅಲ್ಲಂ ವೀರಭದ್ರಪ್ಪ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಬಂದಿದೆ.

ಆ) ಜಿಲ್ಲಾವಾರು ವಿವರಗಳನ್ನು ಅನುಬಂಧ - 1 ರಲ್ಲಿ ಒದಗಿಸಿದೆ.

ಇ) ಸರ್ಕಾರವು ರೈತರಿಗೆ ಶೇಕಡ 50 ರ ರಿಯಾಯಿತಿಯಲ್ಲಿ ಕೀಟ ನಾಶಕ ಒದಗಿಸಲು ರೂ. 376 ಲಕ್ಷಗಳ ವಿಶೇಷ ಯೋಜನೆಗೆ ಮಂಜೂರಾತಿ ನೀಡಿದೆ. ಅದರಲ್ಲಿ ರೂ. 244 ಲಕ್ಷಗಳನ್ನು ಈಗಾಗಲೇ ಬಿಡುಗಡೆ ಮಾಡಿದೆ. ವಿವರಗಳನ್ನು ಅನುಬಂಧ-2 ರಲ್ಲಿ ಸಲ್ಲಿಸಿದೆ.

ಅನುಬಂಧ - 1

ಕರ್ನಾಟಕ ರಾಜ್ಯದಲ್ಲಿ ತೆಂಗು ಬೆಳೆಯುವ ಪ್ರಮುಖ ಜಿಲ್ಲೆಗಳಲ್ಲಿ ತೆಂಗು ನುಸಿ ಭಾದೆಗೆ ತುತ್ತಾದ ಮರಗಳ ವಿವರ ಹಾಗೂ ವಿಸ್ತೀರ್ಣದ ಬಗ್ಗೆ ವಿವರ :

ಕ್ರ.ಸಂ	ಜಿಲ್ಲೆ	ತೆಂಗಿನ ನುಸಿಭಾದೆಗೆ ತುತ್ತಾದ ಮರಗಳ ಒಟ್ಟು ವಿಸ್ತೀರ್ಣ (ಲಕ್ಷ ಹೆ.ಗಳಲ್ಲಿ)	ನುಸಿ ಭಾದೆಗೆ ತುತ್ತಾದ ಒಟ್ಟು ಮರಗಳ ಸಂಖ್ಯೆ (ಲಕ್ಷಗಳಲ್ಲಿ)
1	ತುಮಕೂರು	0.052	7.85
2	ಮಂಡ್ಯ	0.039	5.87
3	ಚಿಕ್ಕಮಗಳೂರು	0.035	5.30
4	ಬೆಂಗಳೂರು (ನಗರ)	0.031	4.695
5	ಬೆಂಗಳೂರು (ಗ್ರಾಮಾಂತರ)	0.04	6.300
6	ಚಿತ್ರದುರ್ಗ	0.073	11.290

1	2	3	4
7	ದಾವಣಗೆರೆ	0.008	1.15
8	ಹಾಸನ	0.055	8.29
9	ಕೋಲಾರ	0.045	6.78
10	ಶಿವಮೊಗ್ಗ	0.011	1.61
11	ಮೈಸೂರು	0.023	3.50
12	ಚಾಮರಾಜನಗರ	0.011	1.60
13	ಉತ್ತರ ಕನ್ನಡ	0.003	0.410
14	ದಕ್ಷಿಣ ಕನ್ನಡ	ನುಸಿ ಪೀಡೆ ಭಾಧೆಯ ಬಗ್ಗೆ ಪ್ರಾಥಮಿಕ ವರದಿ ಇದೆ	
	ಒಟ್ಟು	**0.426**	**64.645**

ಅನುಬಂಧ - 2

ನುಸಿ ಬಾದೆಯ ಪ್ರಮಾಣವನ್ನು ತಿಳಿಯಲು ಎಲ್ಲಾ ತೆಂಗು ಬೆಳೆಯುವ ಜಿಲ್ಲೆಗಳಲ್ಲಿ ಸಮೀಕ್ಷೆ ತಂಡಗಳ ಮೂಲಕ ಗಣತಿ ಮಾಡಲಾಗುತ್ತದೆ. ಇದರಂತೆ ಪ್ರಸಕ್ತ ರಾಜ್ಯದ 14 ಜಿಲ್ಲೆಗಳಲ್ಲಿ 65 ಲಕ್ಷ ತೆಂಗಿನ ಮರಗಳು ನುಸಿ ಪೀಡೆಗೆ ಒಳಗಾಗಿದೆ ಎಂದು ಸಮೀಕ್ಷಿಸಲಾಗಿದೆ. ಈ ನುಸಿ ಭಾದೆಯು ಗಮನಕ್ಕೆ ಬಂದ ಕೂಡಲೇ ಕೃಷಿ ವಿಶ್ವವಿದ್ಯಾಲಯದ ತಜ್ಞರೊಂದಿಗೆ ವ್ಯಾಪಕವಾಗಿ ಚರ್ಚಿಸಿ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ರೂಪು ರೇಷಗಳನ್ನು ತಯಾರಿಸಲಾಯಿತು. ತೆಂಗು ಬೆಳೆಯುವ ಮುಖ್ಯ ಜಿಲ್ಲೆಗಳಲ್ಲಿ ವಿಶ್ವ ವಿದ್ಯಾನಿಲಯದ ತಜ್ಞರೊಂದಿಗೆ ವ್ಯಾಪಕ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ವಿವಿಧ ಪ್ರಚಾರ ಮಾಧ್ಯಮಗಳ ಮೂಲಕವೂ ಸಹ ರೈತರಿಗೆ ನುಸಿ ಬಾದೆಯನ್ನು.ಹತೋಟಿ ತರುವ ಬಗ್ಗೆ ಮಾಹಿತಿ ನೀಡಲಾಯಿತು. ರೈತರಲ್ಲಿ ಜಾಗೃತಿ ಮೂಡಿಸಲು ಕರಪತ್ರಗಳನ್ನು ಮುದ್ರಿಸಿ ಹಂಚಲಾಯಿತು.

ಕರ್ನಾಟಕ ಸರ್ಕಾರವು ನುಸಿ ಭಾದಿತ ಜಿಲ್ಲೆಗಳಲ್ಲಿ ಸಾಮೂಹಿಕವಾಗಿ ನಿವಾರಣಾ ಕ್ರಮಗಳನ್ನು ತೆಗೆದುಕೊಳ್ಳಲು ರೈತರಿಗೆ ಶೇ. 50ರ ರಿಯಾಯಿತಿಗಳಲ್ಲಿ ಕೀಟನಾಶಕಗಳನ್ನು ಒದಗಿಸಲು 375 ಲಕ್ಷ ರೂ.ಗಳ ಯೋಜನೆಗೆ ಮಂಜೂರಾತಿ ನೀಡಿವೆ. ಈ ಯೋಜನೆಯಡಿ 244 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಸದರಿ ಕಾರ್ಯಕ್ರಮವನ್ನು ಸಮರೋಪಾದಿಯಲ್ಲಿ ಸಾಮೂಹಿಕವಾಗಿ ಅನುಷ್ಠಾನಗೊಳಿಸಬೇಕಾಗಿರುವುದರಿಂದ ಕ್ಷೇತ್ರ ಮಟ್ಟದಲ್ಲಿ ತೋಟಗಾರಿಕೆ ಇಲಾಖೆಯ ಸಿಬ್ಬಂದಿ ಮಾತ್ರವೇ ಮಾಡಲು ಅಸಾಧ್ಯವಾಗುವುದರಿಂದ ಇತರೆ ಇಲಾಖೆಯ ಸಿಬ್ಬಂದಿ ಮತ್ತು ವಾಹನಗಳನ್ನು ಒಳಗೊಂಡಂತೆ ತಂಡವನ್ನು ರಚಿಸಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತದೆ. ಈ

ಉದ್ದೇಶಕ್ಕಾಗಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿಯವರನ್ನು ಒಳಗೊಂಡಂತೆ ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿಯನ್ನು ರಚಿಸಿ ಈ ಸಮಿತಿಯ ಮುಖೇನ ಜಿಲ್ಲಾ ಮಟ್ಟದಲ್ಲಿ ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲು ಬೇಕಾದ ಎಲ್ಲಾ ಸಿದ್ದತೆಗಳನ್ನು ತೀರ್ಮಾನಗಳನ್ನು ತೆಗೆದುಕೊಳ್ಳುವ ಅಧಿಕಾರವನ್ನು ನೀಡಲಾಗಿದೆ. ಇದೇ ರೀತಿ ತಾಲ್ಲೂಕು ಮಟ್ಟದಲ್ಲಿ ಮತ್ತು ಹೋಬಳಿ ಮಟ್ಟದಲ್ಲಿ ಉಪ ಸಮಿತಿಗಳನ್ನು ರಚಿಸಿ ಇವುಗಳ ಮುಖೇನ ಪರಿಣಾಮಕಾರಿಯಾಗಿ ರೈತರ ತೋಟಗಳಲ್ಲಿ ನುಸಿ ಭಾದೆ ಹತೋಟಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತದೆ.

ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ತೆಗೆದುಕೊಳ್ಳಬೇಕಾದ ಪ್ರತಿಯೊಂದು ಅಂಶದ ಬಗ್ಗೆ ವಿವರವಾದ ತಾಂತ್ರಿಕ ಸೂಚನೆಗಳನ್ನು ಒಳಗೊಂಡಂತೆ ಸುತ್ತೋಲೆಯನ್ನು ಹೊರಡಿಸಲಾಗಿದೆ. ಸದ್ಯದಲ್ಲಿ ನುಸಿ ಭಾದಿತ ಎಲ್ಲಾ ಜಿಲ್ಲೆಗಳಲ್ಲಿ ಹತೋಟಿ ಕಾರ್ಯಕ್ರಮವು ಈಗಾಗಲೇ ಜಾರಿಗೊಳಿಸಿದ್ದು, ತ್ವರಿತಗತಿಯಲ್ಲಿ ಮುಂದುವರಿಯುತ್ತಿದೆ. ಒಟ್ಟಿನಲ್ಲಿ ಸರ್ಕಾರವು ನುಸಿ ಭಾದೆ ವಿಷಯವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದ್ದು, ನುಸಿ ಭಾದೆಯನ್ನು ಹತೋಟಿಗೆ ತರಲು ಬೇಕಾದ ಎಲ್ಲಾ ಕ್ರಮಗಳನ್ನು ಪರಿಣಾಮಕಾರಿಯಾಗಿ ಕೈಗೊಂಡು ರಾಜ್ಯದಲ್ಲಿ ತೆಂಗು ಬೆಳೆಯನ್ನು ರಕ್ಷಿಸಿ ರೈತರ ಹಿತಾಸಕ್ತಿಯನ್ನು ಕಾಪಾಡಲು ಬದ್ಧವಾಗಿದೆ ಮತ್ತು ಈ ದಿಸೆಯಲ್ಲಿ ಸಮರೋಪಾದಿಯಲ್ಲಿ ಕಾರ್ಯೋನ್ಮುಖವಾಗಿದೆ.

ನೈಸರ್ಗಿಕ ವಿಕೋಪದಿಂದ ಆಗಿರುವ ನಷ್ಟ

459 - ಶ್ರೀ ಬಚ್ಚೇಗೌಡ ಬಿ.ಎಸ್. (ಹೊಸಕೋಟೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಅತಿವೃಷ್ಟಿ ಮತ್ತು ಅನಾವೃಷ್ಟಿಯಿಂದ ತೊಂದರೆಯಾದ ಪ್ರದೇಶಗಳಿಗೆ ಇದುವರೆವಿಗೂ ಪ್ರಕೃತಿ ವಿಕೋಪದ ನಿಧಿಯಿಂದ ಸರ್ಕಾರ ಕೊಟ್ಟಿರುವ ಹಣ ಎಷ್ಟು? (ಮೂರು ವರ್ಷಗಳ ವಿವರ ನೀಡುವುದು).*

ಆ) *ಕೇಂದ್ರ ಸರ್ಕಾರದಿಂದ ನೈಸರ್ಗಿಕ ವಿಕೋಪದ ಹಾನಿಗೆ ಇದುವರೆಗೆ ಪಡೆದಿರುವ ಹಣ ಎಷ್ಟು?*

ಇ) *ವಿವಿಧ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳು ಖರ್ಚು ಮಾಡಿರುವ ಹಣವೆಷ್ಟು? ಅದಕ್ಕೆ ಮಾರ್ಗಸೂಚಿ ಏನು?*

ಈ) *ನೈಸರ್ಗಿಕ ವಿಕೋಪದಿಂದ ಆಗಿರುವ ಒಟ್ಟು ನಷ್ಟ ಎಷ್ಟು?*

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ವಿವರ ಈ ಕೆಳಕಂಡಂತಿದೆ.